ಸಭೆಯ ನಿರ್ಣಯದನ್ವಯ ಜುಲೈ ೨೦೦೫ರಿಂದ ಮಾರ್ಚ್ ೨೦೦೬ಗೆ ಒಳಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಸರಬರಾಜು ಕಂಪನಿವಾರು ಜಿಲ್ಲಾವಾರು ಹಾಗೂ ಮಾಸಿಕವಾರು ಗುರಿಯನ್ನು ನಿಗದಿಪಡಿಸಿ ವಿದ್ಯುತ್ ಸಂಪರ್ಕ ಮಾಡಲು ಕೆ.ಪಿ.ಟಿ.ಸಿ.ಎಲ್ ರವರು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೂಚನೆ ನೀಡಿರುತ್ತಾರೆ.

**ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ**

೧೬ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿದೆ. ಬೆಸ್‌ಕಾಂನವರು ಸದರಿ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿರುತ್ತದೆ. ಕಳೆದ ಮೂರು ವರ್ಷಗಳಿಂದ ಈ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿರುತ್ತದೆ. ನಿಗಮವು ಕರ್ನಾಟಕ ವಿದ್ಯುದ್ದೀಪ್ರಸರಣಾ ನಿಗಮದೊಡನೆ ಚರ್ಚಿಸಿದ್ದು, ಈ ಕೊಳವೆ ಬಾವಿಗಳನ್ನು ಆದಷ್ಟು ಬೇಗನೆ ವಿದ್ಯುದ್ದೀಕರಣ ಗೊಳಿಸಲು ತಿಳಿಸಲಾಗಿರುತ್ತದೆ.

**ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ** :-

ವಿದ್ಯುದ್ದೀಕರಣವಾಗದೇ ಇರುವ ಕೊಳವೆ ಬಾವಿಗಳು ಇರುವುದಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**೩೮೬೬ (೪೩೮೬) ಶ್ರೀ ಜಗದೀಶ್ ಶೆಟ್ಟರ್** :- ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣ ನೀಡಬೇಕಾದುದು ಎಷ್ಟು;

ಆ) ಇನ್ನೂ ಎಷ್ಟು ಹಣ ನೀಡಲು ಬಾಕಿ ಇದೆ;

ಇ) ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

**ಶ್ರೀ ಪಿ.ಜಿ. ಆರ್.. ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)** :

ಅ) ದಿನಾಂಕ : ೧-೧-೯೯ ರಿಂದ ೩೧.೩.೨೦೦೫ ರವರೆಗೆ ರೂ. ೪೯೨.೮೮ ಕೋಟಿ ಸಹಾಯಧನವನ್ನು ೨೦೬೪ಳಳ ಘಟಕಗಳಿಗೆ ಮಂಜೂರು ಮಾಡಲಾಗಿದ್ದು, ದಿನಾಂಕ : ೧-೧-೯೯ ರಿಂದ ೩೧-೩-೨೦೦೪ ರವರೆಗೂ ಸಹಾಯಧನ ಮಂಜೂರಾದ ಮೊತ್ತದಲ್ಲಿ ಶೇ. ೫೦ರಷ್ಟು ಎಲ್ಲ ಘಟಕಗಳಿಗೂ (ಕೋಳಿ ಸಾಕಾಣಿಕೆ,

ಇಟ್ಟಿಗೆ ಮತ್ತು ಸ್ವಂತ ಬಂಡವಾಳ ಹೂಡಿಕೆ ಘಟಕಗಳನ್ನು ಹೊರತುಪಡಿಸಿ) ಬಿಡುಗಡೆ ಮಾಡಲಾಗಿದೆ. ದಿನಾಂಕ ೧.೧.೯೯ ರಿಂದ ೩೧.೩.೨೦೦೦ ರವರೆಗೆ ಬಾಕಿ ಇರುವ ಶೇ. ೫೦ ರಷ್ಟು ಸಹಾಯಧನವನ್ನು ಈ ಮಾಹೆಯಲ್ಲಿ ಬಿಡುಗಡೆಗೊಳಿಸಲು ಸರ್ಕಾರದ ಆದೇಶ ಹೊರಡಿಸಲಾಗಿದೆ.

ಆ) ರೂ. ೩೪೫.೬೩ ಕೋಟಿ ಹಣ ಬಿಡುಗಡೆ ಮಾಡಲು ಬಾಕಿ ಇರುತ್ತದೆ.

ಇ) ಈ ಹಣವನ್ನು ೨೦೦೫-೦೬ ಹಾಗೂ ಮುಂದಿನ ಸಾಲುಗಳಲ್ಲಿ ಬಿಡುಗಡೆ ಮಾಡಲಾಗುವುದು.

**೩೮೬೭ (೩೮೦೨) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :-** ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ಬಳಿ ನಿರ್ಮಿಸಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಇತ್ತೀಚಿನ ಪ್ರಗತಿ ಯಾವ ಹಂತದಲ್ಲಿದೆ;

ಆ) ಈ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗಿದೆಯೇ ಹಾಗೂ ಯಾವಾಗ ಪೂರ್ಣಗೊಳ್ಳುವುದು?

**ಶ್ರೀ. ಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :**

ಅ) ೧. ರಾಜ್ಯ ಸರ್ಕಾರವು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಬಿ.ಐಎಎಲ್) ಸಂಸ್ಥೆಯೊಂದಿಗೆ ರಾಜ್ಯ ಬೆಂಬಲ ಒಪ್ಪಂದವನ್ನು ಮತ್ತು ಕೆಎಸ್ಐಐಡಿಸಿ ಮುಖಾಂತರ ಭೂ ಗುತ್ತಿಗೆ ಒಪ್ಪಂದವನ್ನು ದಿನಾಂಕ ೨೦.೦೧.೨೦೦೫ ರಂದು ಸಹಿ ಮಾಡಲಾಗಿದೆ.

೨. ಕೆಎಸ್ಐಐಡಿಸಿಯು ಗುತ್ತಿಗೆ ಪತ್ರದ ಮೂಲಕ ಭೂಮಿಯನ್ನು ದಿನಾಂಕ ೩೦-೦೪-೨೦೦೫ ರಂದು ಬಿಐಎಎಲ್‌ಗೆ ಹಸ್ತಾಂತರಿಸಿದೆ.

೩. ಸಾಲ ಕೊಡುವವರೊಂದಿಗೆ ಹಣಕಾಸು ಒಪ್ಪಂದದ ಜೊತೆಗೆ ಎಲ್ಲಾ ಯೋಜನಾ ಒಪ್ಪಂದಗಳು ಪೂರ್ಣಗೊಂಡಿದ್ದು ೨೩-೦೬-೨೦೦೫ ರಂದು ಹಣಕಾಸು ವ್ಯವಸ್ಥೆಯನ್ನು ಸಾಧಿಸಲಾಗಿದೆ.